# GOVERNMENT OF KARNATAKA

**Department of Pre-University Education, Malleswaram, Bangalore-560 012**
**Central Sector Scheme of Scholarship for Colleges and University students 2018 (Karnataka)**

## INSTRUCTION SHEET

**ವಿದ್ಯಾರ್ಥಿ ವೇತನದ ಅರ್ಜಿಯನ್ನು Onlineನಲ್ಲಿ ತುಂಬಲು ವಿದ್ಯಾರ್ಥಿಗಳು / ಸಂಸ್ಥೆಯವರುಗಳಿಗೆ ಮಾರ್ಗಸೂಚಿ**

1. ವಿದ್ಯಾರ್ಥಿಗಳ ಮಾರ್ಗಸೂಚಿ (INSTRUCTION SHEET) 07 ಪುಟಗಳನ್ನು ಹೊಂದಿರುತ್ತದೆ. ಮಾರ್ಗಸೂಚಿಯಂತೆ ಅರ್ಜಿಯನ್ನು ಹಿರಿಯರ ಸಹಾಯದಿಂದ ಎಚ್ಚರಿಕೆಯಿಂದ ತುಂಬಬೇಕು. (ಪುಟ ಸಂಖ್ಯೆ:01 – 07)

2. ಕಾಲೇಜು/ಶಿಕ್ಷಣ ಸಂಸ್ಥೆಯವರುಗಳ ಮಾರ್ಗಸೂಚಿ (INSTRUCTION SHEET) 02 ಪುಟಗಳನ್ನು ಹೊಂದಿರುತ್ತದೆ. ಮಾರ್ಗಸೂಚಿಯಂತೆ ಅರ್ಜಿಯನ್ನು ಎಚ್ಚರಿಕೆಯಿಂದ ತುಂಬಬೇಕು. _(ಪುಟ ಸಂಖ್ಯೆ:07 – 08)

Top 20th Percentile or 80th Percentile ಮೇಲೆ ಇರುವ ವಿದ್ಯಾರ್ಥಿಗಳು ಮಾತ್ರ ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು, ಅರ್ಜಿಯನ್ನು ಸಲ್ಲಿಸುವ ಮೊದಲು ಗಮನಿಸಬೇಕಾದ ಮುಖ್ಯ ಅಂಶಗಳು ಈ ಕೆಳಗಿನಂತಿವೆ.

- ವಿದ್ಯಾರ್ಥಿಗಳು National Scholarship Portalನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಂಡು, ಯಾವ ಸಮಯದಲ್ಲಾದರೂ / ಎಲ್ಲಿಂದಲಾದರೂ ಈ ವಿದ್ಯಾರ್ಥಿ ವೇತನಕ್ಕೆ online ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

- ನೋಂದಣಿಯ ನಂತರ ಪಡೆಯಲ್ಪಟ್ಟ Temporary ID / Permanent ID ಮತ್ತು ಜನ್ಮ ದಿನಾಂಕದ ಮೇರೆಗೆ ವಿದ್ಯಾರ್ಥಿಗಳು online ಮೂಲಕ ಸಲ್ಲಿಸಿದ ಅರ್ಜಿಯ ವಿವರವನ್ನು ಹಾಗೂ ಅರ್ಜಿಯ ಪರಿಶೀಲನೆಯ ಸ್ಥಿತಿಗತಿಗಳನ್ನು ತಿಳಿಯಬಹುದಾಗಿರುತ್ತದೆ.

- ವಿದ್ಯಾರ್ಥಿಗಳು online ಮೂಲಕ ಅರ್ಜಿ ಸಲ್ಲಿಸುವ ಸಮಯದಲ್ಲಿ ಅಳವಡಿಸಿರುವ ಅಗತ್ಯ ದಾಖಲೆ(ಉದಾಃ– ಅಂಕಪಟ್ಟಿಗಳು, ಬ್ಯಾಂಕ್ ವಿವರಗಳು, ಜಾತಿ/ಆದಾಯ ಪ್ರಮಾಣ ಪತ್ರಗಳು ಇತರೆ)ಗಳನ್ನು ಪಾರದರ್ಶಕವಾಗಿ ಪರಿಶೀಲಿಸಬಹುದಾಗಿರುತ್ತದೆ/ವೀಕ್ಷಿಸಬಹುದಾಗಿರುತ್ತದೆ.

- ಈ ಪ್ರಕ್ರಿಯೆಯ ವಿವಿಧ ಹಂತಗಳಲ್ಲಿ ವಿದ್ಯಾರ್ಥಿಗಳು ಹಾಗೂ ಕಾಲೇಜು/ಇನ್ಸ್‌ಟಿಟ್ಯೂಷನ್‌ಗಳವರಿಗೆ ದೂರವಾಣಿ ಸಂದೇಶಗಳನ್ನು(SMS) ನೀಡುವ ವ್ಯವಸ್ಥೆಯನ್ನು ಈ ಸಿಸ್ಟಂ ಹೊಂದಿರುತ್ತದೆ. ಆದಕಾರಣ, ವಿದ್ಯಾರ್ಥಿಗಳು ಈ ಸಿಸ್ಟಂನಲ್ಲಿ ಮೊದಲ ಬಾರಿಗೆ ದಾಖಲಿಸಿದ ದೂರವಾಣಿ ಸಂಖ್ಯೆಯನ್ನೇ ವಿದ್ಯಾರ್ಥಿ ವೇತನದ ಅಂತಿಮ ನವೀಕರಣದವರೆಗೆ ಹೊಂದಿರುವುದು. ಪದೇ ಪದೇ ದೂರವಾಣಿ ಸಂಖ್ಯೆಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು.

- ಈ ಸಿಸ್ಟಂನಲ್ಲಿ ನೋಂದಣಿ ಮಾಡಿಕೊಳ್ಳುವ ಪ್ರತಿಯೊಬ್ಬ ಅರ್ಹ ವಿದ್ಯಾರ್ಥಿಯೂ ನೋಂದಣಿಯ ನಂತರ ದೊರೆಯುವ ನೋಂದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಒಂದೆಡೆ ಸಂಗ್ರಹಿಸಿಟ್ಟುಕೊಳ್ಳುವುದು. ಒಂದು ವೇಳೆ ವಿದ್ಯಾರ್ಥಿಯು ವಿದ್ಯಾರ್ಥಿ ವೇತನಕ್ಕೆ ಆಯ್ಕೆಗೊಂಡಲ್ಲಿ ಮುಂದಿನ ನವೀಕರಣಗಳಿಗೂ ಇದೇ ನೋಂದಣಿ ಸಂಖ್ಯೆಯನ್ನು ಉಪಯೋಗಿಸಬೇಕಿರುತ್ತದೆ.

- ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ, ಸುಲಭವಾಗಿ ವರ್ಗಾಯಿಸಲ್ಪಡುವ ವ್ಯವಸ್ಥೆಯನ್ನು ಈ ಸಿಸ್ಟಂ ಹೊಂದಿರುತ್ತದೆ.

- ಈ ವಿದ್ಯಾರ್ಥಿ ವೇತನಕ್ಕೆ online ಮೂಲಕ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಈ ಕೆಳಕಾಣಿಸಿದ ದಾಖಲೆಗಳನ್ನು ಸ್ಕ್ಯಾನ್ ಮಾಡಿಸಿ ಸಿದ್ದಪಡಿಸಿಟ್ಟುಕೊಳ್ಳುವುದು.

1. Tution fee Paid Receipt
2. Admission fee Paid Receipt
3. Student Photo
4. Student Signature
5. Parental Income Certificate
6. Adhar Card
7. Caste certificate
8. Copy of Previous Academic Marks Sheet(II PUC)
9. Bank Pass Book.

ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಇಚ್ಚಿಸುವ ವಿದ್ಯಾರ್ಥಿಗಳು, ಅರ್ಜಿಯನ್ನು ಸಲ್ಲಿಸುವ ಮೊದಲು ಈ ಕೆಳಕಾಣಿಸಿದ ಸೂಚನೆಗಳನ್ನು / ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸುವುದು.

- ವಿದ್ಯಾರ್ಥಿಗಳು **National Scholarship Portal–2018–19**ರಲ್ಲಿ online ಮೂಲಕ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ಸೂಚನೆಗಳನ್ನು ಸರಿಯಾಗಿ ಓದಿ, ಅರ್ಥ ಮಾಡಿಕೊಂಡು, ಅಗತ್ಯ ದಾಖಲೆಗಳನ್ನು ಸಿದ್ದಪಡಿಸಿಕೊಂಡು ಮುಂದುವರಿಯುವುದು.

- ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ನಿಗಧಿ ಪಡಿಸಿರುವ ಷರತ್ತುಗಳಿಗೆ ಬದ್ಧರಾಗಿ, ತಾವು ದಾಖಲಿಸುವ ಮಾಹಿತಿಗಳಿಗೆ ತಾವೇ ಜವಾಬ್ದಾರರಾಗುವ ಕಾರಣ, ಮಾಹಿತಿಯನ್ನು ದಾಖಲಿಸುವ ಸಮಯದಲ್ಲಿ ಅತ್ಯಂತ ಜಾಗರೂಕರಾಗಿರುವುದು.

- ಅರ್ಜಿಯನ್ನು ದಾಖಲಿಸುವ ಸಮಯದಲ್ಲಾಗಲೀ ಅಥವಾ ಸಲ್ಲಿಸಿದ ನಂತರವಾಗಲೀ ಅಥವಾ ಸಂಬಂಧಿತ ಇಲಾಖೆ / ಶಿಕ್ಷಣ ಸಂಸ್ಥೆಗಳಿಂದ ಅರ್ಜಿಗಳ ಪರಿಶೀಲನಾ ಸಮಯದಲ್ಲಾಗಲೀ ವಿದ್ಯಾರ್ಥಿಯು ಸುಳ್ಳು ದಾಖಲೆಗಳನ್ನು ದಾಖಲಿಸಿರುವುದು ಕಂಡು ಬಂದಲ್ಲಿ ಯಾವುದೇ ಸೂಚನೆಯನ್ನು ನೀಡದೇ ವಿದ್ಯಾರ್ಥಿ ವೇತನವನ್ನು ರದ್ದುಗೊಳಿಸಲಾಗುವುದು. ಅಂತಹ ವಿದ್ಯಾರ್ಥಿಯ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಹಾಗೂ ಮುಂದಿನ 05 ವರ್ಷಗಳ ಕಾಲ ಕೇಂದ್ರ ಸರ್ಕಾರದ ವತಿಯಿಂದ ದೊರೆಯಬಹುದಾದ ಯಾವುದೇ ವಿದ್ಯಾರ್ಥಿ ವೇತನವನ್ನು ಪಡೆಯದಂತೆ ಬ್ಲಾಕ್‌ಲಿಸ್ಟ್‌ಗೆ ಆ ವಿದ್ಯಾರ್ಥಿಯ ಹೆಸರನ್ನು ಸೇರಿಸಲಾಗುವುದು.

- ಕಡ್ಡಾಯವಾಗಿ 2018ರ ಮಾರ್ಚ್/ಏಪ್ರಿಲ್‌ನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳು ಮಾತ್ರಾ ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿಯನ್ನು ಸಲ್ಲಿಸುವುದು.

- ಕಳೆದ ಸಾಲಿನಲ್ಲಿ 2010, 2011, 2012ದ 2013, 2014, 2015 ಹಾಗೂ ಇನ್ನೂ ಹಿಂದಿನ ಸಾಲುಗಳಲ್ಲಿ ದ್ವಿತೀಯ ಪಿಯುಸಿ ಪಾಸಾದ ವಿದ್ಯಾರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ **online ಮೂಲಕ** ಅರ್ಜಿ ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಮತ್ತು ಈಗಾಗಲೇ ಈ ವಿದ್ಯಾರ್ಥಿ ವೇತನಕ್ಕೆ ಆಯ್ಕೆಗೊಂಡಿರುವ ವಿದ್ಯಾರ್ಥಿಗಳೂ ಕೂಡ ನವೀಕರಣದ ನಿಮಿತ್ತ (ಹಿಂದಿನ ಸಾಲುಗಳ ಉದಾ:2011, 2012, 2013 ಹಾಗೂ 2014) **online ಮೂಲಕ** ಅರ್ಜಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಈ ಬಾರಿಯೂ ಕೂಡ ಇದು ಮರುಕಳಿಸಿದಲ್ಲಿ ಅಂತಹ ವಿದ್ಯಾರ್ಥಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಹಾಗೂ ಆಯ್ಕೆಗೊಂಡಿರುವ ವಿದ್ಯಾರ್ಥಿಗಳ ಮುಂದಿನ ನವೀಕರಣಗಳನ್ನು ತಡೆಹಿಡಿಯಲಾಗುವುದು.

- ವಿದ್ಯಾರ್ಥಿಗಳು ಅಂತಿಮವಾಗಿ ಅರ್ಜಿಯನ್ನು ಸಲ್ಲಿಸುವ ಮೊದಲು ಕಡ್ಡಾಯವಾಗಿ ಮರುಪರಿಶೀಲನೆ ಮಾಡುವುದು. ಒಮ್ಮೆ ಅರ್ಜಿಯನ್ನು ಅಂತಿಮವಾಗಿ ಸಲ್ಲಿಸಿದ ನಂತರ ಯಾವುದೇ ರೀತಿಯ ಬದಲಾವಣೆಗೆ ಅವಕಾಶವಿರುವುದಿಲ್ಲ.

- ವಿದ್ಯಾರ್ಥಿಗಳು ಕೇವಲ ಒಂದು ಬಾರಿಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಒಂದು ವೇಳೆ ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಸಲ್ಲಿಸಿರುವುದು ಕಂಡು ಬಂದಲ್ಲಿ ಅಂತಹ ವಿದ್ಯಾರ್ಥಿಗಳ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

- ಅರ್ಜಿಯನ್ನು ಕಡ್ಡಾಯವಾಗಿ online ಮೂಲಕವೇ ಸಲ್ಲಿಸುವುದು. ಬೇರಾವುದೇ ಮಾದರಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

- ಕಳೆದ ಬಾರಿ rowsing ಛಿಜಟಣಡಿಜಗಳವರಿಗೆ ವಿದ್ಯಾರ್ಥಿಗಳು ತಮ್ಮ ವೈಯ್ಯಕ್ತಿಕ ದಾಖಲೆಗಳನ್ನು ನೀಡಿ ತೊಂದರೆಗೆ ಸಿಲುಕಿರುವುದು ಕಂಡು ಬಂದಿರುತ್ತದೆ. ಆದಕಾರಣ, ಸ್ವತಃ ವಿದ್ಯಾರ್ಥಿಗಳೇ ಅರ್ಜಿಯನ್ನು ಸಲ್ಲಿಸುವಂತೆ ಕೋರಿದೆ.

- ಈ ಸಿಸ್ಟಂನಲ್ಲಿ ನಮೂದಿಸಬೇಕಿರುವ ಕೆಲವು * ಗುರುತಿನ ಮಾಹಿತಿಗಳು - **Mandatory** ಆಗಿರುವುದರಿಂದ ಅವಶ್ಯಕತೆ ಕಂಡು ಬಂದಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಬಹುದಾಗಿರುತ್ತದೆ.

ಈ ವಿದ್ಯಾರ್ಥಿ ವೇತನಕ್ಕೆ **www.scholarships.gov.in**ನ ಅಂತರ್ಜಾಲದಲ್ಲಿಯೇ **online** ಮೂಲಕ ಅರ್ಜಿಯನ್ನು ಸಲ್ಲಿಸುವುದು. ಇದಕ್ಕೆ ಸಂಬಂದಪಟ್ಟ ಲಿಂಕ್‌ನ್ನು ಈ ಕೆಳಗಿನಂತೆ ನೀಡಲಾಗಿದೆ.

**clik on - www.scholarships.gov.in**

↓ **clik on**

**New User? Register**

\- **appears - Guidelines for Registration on NSP. Read all instruction carefully and then**

↓ **click on**

↓ click on

**Continue - appears**

**Fresh Student Registration Form For Academic Year 2017-18**

State of Domicile

Scholarship Category

Name of Student

Date of Birth (DD/MM/YYYY)

Gender

Mobile Number

Email Id


Identification Detail

Bank IFSC Code

Bank A/C Number

Bank Name

Captcha Code



57 4 56 7

*** First Time Login Can Done After Entering OTP(ONE TIME PASSWORD) Send By NSP. Verify Mobile Number Before Submit

REGISTER

**After registeration you will get Permanent Id and Password. Note down the Id and password for future purpose.**

↓ **click on**

↓ **click on**

'Login to Apply' **option** - **Using Id and password login here and fill up the application carefully. Finaly take a printed copy of the application and submit all records to your institution where you are studying**

**Students can also contact Help line – 0120 – 6619540 – 9.00 A.M. to 5.30 P.M.**

**ಷರತ್ತುಗಳುಃ–**

**ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಹಾಕುವವರು ತಮ್ಮ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಉನ್ನತ ಶಿಕ್ಷಣದಲ್ಲಿ ಮುಂದುವರಿಸಿರಬೇಕು. ಕನಿಷ್ಠ 03 ವರ್ಷದ ಪದವಿ ತರಗತಿಗೆ ದಾಖಲಾಗಿರಬೇಕು.**

**Diploma in Education / Diploma in Technical Courses / 02 Years Diploma in Pharmacy Courses / Diploma in Hotel Management / Chartered Accountancy / Diploma in Nursing / Post Graduation in Diploma in Administration / Post Graduation in Diploma in Management / Post Graduation in Certification Management / Correspondence / Distant Education Courses** ಇತ್ಯಾದಿ ತರಗತಿಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಹರಲ್ಲ. **ಈ ವಿದ್ಯಾರ್ಥಿಗಳು ಕಡ್ಡಾಯವಾಗಿ ಅರ್ಜಿಯನ್ನು ಹಾಕಬಾರದು.** ಇಂತಹ ವಿದ್ಯಾರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹಾಗೂ ತಿರಸ್ಕೃತಗೊಂಡ ಬಗ್ಗೆ ಯಾವುದೇ ಮಾಹಿತಿಯನ್ನು ನೀಡಲಾಗುವುದಿಲ್ಲ.

2018ರ ವಿದ್ಯಾರ್ಥಿ ವೇತನಕ್ಕೆ ಇಲಾಖೆಯು online ಮೂಲಕ ಅರ್ಜಿಯನ್ನು ಆಹ್ವಾನಿಸುವ ಪೂರ್ವದಲ್ಲಿಯೇ ಕೆಲವು ವಿದ್ಯಾರ್ಥಿಗಳು ಇಲಾಖೆಗೆ ಅರ್ಜಿ ಸಲ್ಲಿಸಿರುತ್ತಾರೆ. ಇಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇದರ ಬಗ್ಗೆ ಪತ್ರ ವ್ಯವಹಾರ ಮಾಡಕೂಡದು. ಇಂತಹ ವಿದ್ಯಾರ್ಥಿಗಳು ಹೊಸದಾಗಿ online ಮೂಲಕ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.

ಅಂತೆಯೇ ವಿದ್ಯಾರ್ಥಿ ವೇತನದ ಸಂಬಂಧ ಅರ್ಜಿ ಸಲ್ಲಿಸಿದ ಕೂಡಲೇ ವಿದ್ಯಾರ್ಥಿ ವೇತನಕ್ಕೆ ಅರ್ಹಗೊಂಡಂತೆ ಎಂದು ವಿದ್ಯಾರ್ಥಿಗಳು ಭಾವಿಸಕೂಡದು. ಮೆರಿಟ್ ಆಧಾರದ ಮೇಲೆ ಕೇಂದ್ರ ಸರ್ಕಾರದ ಮಾರ್ಗಸೂಚಿಯ ನಿಯಮಗಳನುಸಾರ ನಿಗಧಿತ ವಿದ್ಯಾರ್ಥಿಗಳನ್ನು ಮಾತ್ರ ಕೇಂದ್ರ ಸರ್ಕಾರದ ವತಿಯಿಂದಲೇ ಆಯ್ಕೆ ಮಾಡಲಾಗುವುದು. ಆಯ್ಕೆಗೊಂಡ ಅರ್ಹ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಕೇಂದ್ರ ಸರ್ಕಾರದ ವತಿಯಿಂದ ನೇರವಾಗಿ online ಮೂಲಕ ವಿದ್ಯಾರ್ಥಿ ವೇತನವನ್ನು ಜಮೆ ಮಾಡಲಾಗುವುದು.

**SC/ST/OBC** ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು ಕಡ್ಡಾಯವಾಗಿ ತಹಸೀಲ್ದಾರ್‌ರವರಿಂದ ಪಡೆದ ದೃಢೀಕೃತ ಜಾತಿ ಪ್ರಮಾಣ ಪತ್ರವನ್ನು ಹೊಂದಿರಬೇಕು. **PH(ವಿಕಲ ಚೇತನ) ಅಡಿಯಲ್ಲಿ ಅರ್ಜಿ ಹಾಕುವವರು ಸಂಬಂಧಿಸಿದ ದೃಢೀಕೃತ ಪ್ರಮಾಣ ಪತ್ರವನ್ನು ಹೊಂದಿರಬೇಕು.** ಪ್ರಮಾಣ ಪತ್ರ ಸಲ್ಲಿಸದಿದ್ದಲ್ಲಿ ಸಾಮಾನ್ಯ ವರ್ಗದಲ್ಲಿ ಪರಿಗಣಿಸಲಾಗುವುದು.

ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ (ಕೇಂದ್ರ ಸರ್ಕಾರದ ನಿಯಮದಂತೆ) **ರೂ.6.00 ಲಕ್ಷ ಮೀರಿರಬಾರದು(Creamy Layer**ಗೆ ಸೇರಿರಬಾರದು). **ಆದಾಯ ಪ್ರಮಾಣ ಪತ್ರವನ್ನು Income Afffidavit (Annexure-III) ಮೂಲಕ ಕಡ್ಡಾಯವಾಗಿ ಹೊಂದಿರಬೇಕು. ಅಥವಾ ಒಂದು ವೇಳೆ ಹಾಲಿ ವಿದ್ಯಾರ್ಥಿಯ ಬಳಿ ತಹಸೀಲ್ದಾರ್‌ರವರಿಂದ ಪಡೆದ ಜಾತಿ/ಆದಾಯ ಪ್ರಮಾಣ ಪತ್ರವಿದ್ದಲ್ಲಿ, ಅದರ ದೃಢೀಕೃತ ಪ್ರತಿಯನ್ನು ಸಲ್ಲಿಸಬಹುದು. ಆದಾಯ ಪ್ರಮಾಣ ಪತ್ರವಿಲ್ಲದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

**ವಿಶೇಷ ಸೂಚನೆ:**

ಸರ್ಕಾರಿ ಸೇವೆಯಲ್ಲಿರುವ ಪೋಷಕರನ್ನು ಹೊರತು ಪಡಿಸಿ, ಇತರೆ ಖಾಸಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಪೋಷಕರುಗಳು ಖಾಸಗಿ ಸಂಸ್ಥೆಯ ವಿವರವನ್ನು ಹಾಗೂ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ಪಡೆಯುತ್ತಿರವ ವೇತನ ಹಾಗೂ ಇತರೆ ಭತ್ಯೆಗಳ ವಿವರವನ್ನು ನಿಖರವಾಗಿ ದೃಢೀಕರಿಸಿ ನೀಡುವುದು.

ಕೇಂದ್ರ ಸರ್ಕಾರದ ವತಿಯಿಂದ ವಿದ್ಯಾರ್ಥಿ ವೇತನ ವಿತರಣೆಯಲ್ಲಿ ಸರಳೀಕರಣವನ್ನು ಅನುಸರಿಸುವ ನಿಟ್ಟಿನಲ್ಲಿ ಹೊಸದಾಗಿ **National Scholarship Portal**ನ್ನು ಜಾರಿಗೆ ತಂದಿದ್ದು, ಈ ಸಿಸ್ಟಂನ ಮೂಲಕ ತಮ್ಮ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ರವಾನಿಸಬೇಕಿರುತ್ತದೆ. ಈ ಸಿಸ್ಟಂನಲ್ಲಿ ಕೆಲವು ನಿರ್ದಿಷ್ಟ ಬ್ಯಾಂಕ್‌ಗಳನ್ನು ಹೊರತುಪಡಿಸಿ ಬೇರಾವ ಬ್ಯಾಂಕ್‌ಗಳ ಮಾಹಿತಿಯನ್ನು ಮಾನ್ಯ ಮಾಡುವುದಿಲ್ಲ. ಆದಕಾರಣ, ವಿದ್ಯಾರ್ಥಿಗಳು **ತಮ್ಮ ವೈಯಕ್ತಿಕ ಹೆಸರಿನಲ್ಲಿ ಉಳಿತಾಯ (Savings Account) ಖಾತೆಯನ್ನು ಯಾವುದಾದರೊಂದು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮಾತ್ರ ತೆರೆಯಬೇಕು.**

ವಿದ್ಯಾರ್ಥಿಗಳು ತಮ್ಮ ತಂದೆಯ ಅಥವಾ ಇತರರ ಹೆಸರಿನಲ್ಲಿ ತೆರೆದಿರುವ ಜಂಟಿ ಖಾತೆಯ (Joint Account) ಸಂಖ್ಯೆಯನ್ನು ಕೊಡಬಾರದು. ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಯನ್ನು ಕಾಲೇಜಿನ Extension Counterನಲ್ಲಿ ಈ ಉದ್ದೇಶಕ್ಕಾಗಿ ತೆರೆಯಬಾರದು. ಬೇರೆ ಬ್ಯಾಂಕ್‌ಗಳಲ್ಲಿ ಖಾತೆ ತೆರೆದಿದ್ದಾಗ್ಯೂ ಸಹ ವಿದ್ಯಾರ್ಥಿ ವೇತನ ವರ್ಗಾವಣೆ ಮಾಡುವ ಸಲುವಾಗಿ ಒಂದಕ್ಕಿಂತ ಹೆಚ್ಚು ಬ್ಯಾಂಕ್‌ಗಳ ಖಾತೆ ಸಂಖ್ಯೆಗಳನ್ನು ಕೊಡಬಾರದು.

ವಿದ್ಯಾರ್ಥಿ ವೇತನವನ್ನು ಬ್ಯಾಂಕ್ ಮೂಲಕ ಪ್ರತ್ಯೇಕವಾಗಿ ವಿದ್ಯಾರ್ಥಿಗಳ ವೈಯಕ್ತಿಕ ಖಾತೆಗೆ ಜಮೆ ಮಾಡುವುದರಿಂದ ವಿದ್ಯಾರ್ಥಿಗಳು ಖಾತೆ ತೆರೆಯುವ ಬ್ಯಾಂಕ್‌ನ ವಿವರದ ಅವಶ್ಯಕತೆಯಿರುತ್ತದೆ.

ಅಂತೆಯೇ ವಿದ್ಯಾರ್ಥಿ ವೇತನವನ್ನು **Online** ಮೂಲಕ ಜಮೆ ಮಾಡಬೇಕಿದ್ದು ವಿದ್ಯಾರ್ಥಿಯ ಖಾತೆ ಸಂಖ್ಯೆಯು **09** ರಿಂದ **16** digits ಆಗಿರಬೇಕು(Core banking 9 to 16 digits ). ಹಾಗೂ ಬ್ಯಾಂಕ್ ವಿವರಗಳನ್ನು ಅಂದರೆ Bank Name, Branch Name, Branch Code, IFSC Code(11 digits), Bank Accounts No.(Core Banking i.e., 9 to 16 digits) ಮುಂತಾದ ಅಂಕಿಸಂಖ್ಯೆಗಳನ್ನು ಸಂಬಂಧಿಸಿದ ಬ್ಯಾಂಕ್ ಅಧಿಕಾರಿಗಳನ್ನು ಸಂಪರ್ಕಿಸಿ ದೃಢಪಡಿಸಿಕೊಂಡು ಸರಿಯಾಗಿ ತುಂಬಬೇಕು. ತುಂಬುವಾಗ ಅಂಕಿಸಂಖ್ಯೆಗಳು ವ್ಯತ್ಯಾಸವಾದಲ್ಲಿ ವಿದ್ಯಾರ್ಥಿ ವೇತನವನ್ನು ವರ್ಗಾಯಿಸಲು ಸಾಧ್ಯವಾಗುವುದಿಲ್ಲ ಅಥವಾ ಬೇರೆ ಖಾತೆಗೆ ವರ್ಗಾವಣೆಯಾಗುವ ಸಾಧ್ಯತೆಗಳಿರುತ್ತವೆ.

ಮೇಲ್ಕಾಣಿಸಿದ ಬ್ಯಾಂಕ್ ವಿವರಗಳ ಪರಿಶೀಲನೆಗಾಗಿ ವಿದ್ಯಾರ್ಥಿಗಳು ಖಾತೆ ತೆರೆದಿರುವ ಬ್ಯಾಂಕ್ ಪಾಸ್‌ಬುಕ್‌ನ ಸ್ಪಷ್ಟವಾಗಿ ಕಾಣುವ ಮುಖಪುಟದ ದೃಢೀಕೃತ ನಕಲು ಪ್ರತಿಯನ್ನು ಹಾಗೂ ಲಭ್ಯವಿದ್ದಲ್ಲಿ ರದ್ದುಪಡಿಸಿದ ಒಂದು ಚೆಕ್‌ನ (Single cancelled cheque leaf) ಪ್ರತಿಯನ್ನು ಲಗತ್ತಿಸುವುದು.

**2018ನೇ ಸಾಲಿನಿಂದ ಎಂ.ಹೆಚ್.ಆರ್.ಡಿ. ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲಿಚ್ಛಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಆಧಾರ್ ನೋಂದಣಿ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಲಿಂಕ್ ಮಾಡುವುದು ಹಾಗೂ ನಿಗಧಿತ ಸ್ಥಳದಲ್ಲಿ ನಮೂದಿಸುವುದು.**

ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನ ದೊರೆತಲ್ಲಿ ಬೇರೆ ವಿದ್ಯಾರ್ಥಿ ವೇತನ ಪಡೆಯಬಾರದು. ಆದಾಗ್ಯೂ ಸುಳ್ಳು ಮಾಹಿತಿ ನೀಡಿರುವುದು ಭವಿಷ್ಯದಲ್ಲಿ ಕಂಡು ಬಂದಲ್ಲಿ ನಿಯಮಾನುಸಾರ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು.
ವಿದ್ಯಾರ್ಥಿಗಳು ತಾವು ಓದುತ್ತಿರುವ ಕಾಲೇಜಿನ ಹೆಸರು ಮತ್ತು ಸಂಪೂರ್ಣ ವಿಳಾಸವನ್ನು(ಪಿನ್‌ಕೋಡ್ ಜೊತೆ) ನಿಗಧಿತ ಸ್ಥಳದಲ್ಲಿ ಕಡ್ಡಾಯವಾಗಿ ನಮೂದಿಸುವುದು.

ವಿದ್ಯಾರ್ಥಿಗಳು ಅರ್ಜಿಯಲ್ಲಿ ಕೋರಿರುವ ಎಲ್ಲಾ ಮಾಹಿತಿ/ವಿವರಗಳನ್ನು ಸಂಪೂರ್ಣವಾಗಿ ಭರ್ತಿ ಮಾಡುವುದು. ಪತ್ರ ವ್ಯವಹಾರಕ್ಕಾಗಿ ಹಾಗೂ ಮಾಹಿತಿಗಾಗಿ ಸಂಪರ್ಕಿಸಲು ವಿದ್ಯಾರ್ಥಿಗಳು ತಮ್ಮ ಮನೆಯ ಸಂಪೂರ್ಣ ಖಾಯಂ ವಿಳಾಸ(ಕಡ್ಡಾಯವಾಗಿ ಪಿನ್‌ಕೋಡ್ ಜೊತೆ) ಮತ್ತು ದೂರವಾಣಿ ಸಂಖ್ಯೆಯನ್ನು ತಪ್ಪದೇ ಅರ್ಜಿಯಲ್ಲಿ ನಮೂದಿಸುವುದು.

ವಿದ್ಯಾರ್ಥಿಗಳು ದೂರವಾಣಿ ಸಂಖ್ಯೆಯನ್ನು, ಬ್ಯಾಂಕ್ ಹಾಗೂ ಬ್ಯಾಂಕ್ ವಿವರಗಳನ್ನು ಮತ್ತು ಮನೆಯ ವಿಳಾಸವನ್ನು ಪದೇ ಪದೇ ಬದಲಾವಣೆ ಮಾಡದಿರಲು ತಿಳಿಸಿದೆ. ಆದಾಗ್ಯೂ ಇವುಗಳಲ್ಲಿ ಅನಿವಾರ್ಯತೆ ಇದ್ದಲ್ಲಿ ತಕ್ಷಣ ತಿದ್ದುಪಡಿ ಮಾಡಿಸಿಕೊಳ್ಳುವುದು ವಿದ್ಯಾರ್ಥಿಗಳ ಜವಾಬ್ದಾರಿಯಾಗಿರುತ್ತದೆ. ತಪ್ಪಿದಲ್ಲಿ ಅಂತಹ ವಿದ್ಯಾರ್ಥಿಗಳ ಹೆಸರು ನವೀಕರಣದ ಸಂದರ್ಭದಲ್ಲಿ ಬಿಟ್ಟು ಹೋಗುವ ಸಾಧ್ಯತೆ ಇರುತ್ತದೆ. ಹಾಗೂ ಮುಂದಿನ ನಷ್ಟಕ್ಕೆ ತಾವೇ ಜವಾಬ್ದಾರರಾಗುವಿರಿ.

ವಿದ್ಯಾರ್ಥಿಗಳು online ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ಅರ್ಜಿಯ ಪ್ರತಿಯ ಪ್ರಿಂಟನ್ನು ಕಡ್ಡಾಯವಾಗಿ ಪಡೆಯುವುದು. ಹಾಗೂ ಈ ಅರ್ಜಿಯ ಪ್ರತಿಯೊಂದಿಗೆ ಸ್ಕ್ಯಾನ್ ಮಾಡಿ ಅಳವಡಿಸಿದ ಪ್ರತಿಯೊಂದು ದಾಖಲೆಗಳನ್ನು ಮೂಲ ದಾಖಲೆಗಳೊಂದಿಗೆ ಪ್ರಸ್ತುತ ಅಧ್ಯಯನ ಮಾಡುತ್ತಿರುವ ಕಾಲೇಜಿನ ಪ್ರಾಂಶುಪಾಲರಿಗೆ **<u>ಕೂಡಲೇ</u>** ಸಲ್ಲಿಸುವುದು. ವಿದ್ಯಾರ್ಥಿಗಳು ಪ್ರಾಂಶುಪಾಲರಿಗೆ ಸಲ್ಲಿಸುವ ಅರ್ಜಿ ಮತ್ತು ಅಡಕಗಳ ಒಂದು ನಕಲು ಪ್ರತಿಯನ್ನು ಮುಂದಿನ ಮಾಹಿತಿಗಾಗಿ/ವಿಚಾರಣೆ ಸಂಬಂಧ ತಮ್ಮ ಬಳಿ ಕಡ್ಡಾಯವಾಗಿ ಇಟ್ಟುಕೊಳ್ಳುವುದು.

## <u>ಕಾಲೇಜು/ಸಂಸ್ಥೆಗಳವರಿಗೆ ಮಾರ್ಗ ಸೂಚಿ:-</u>

1. ಕಾಲೇಜಿನ ಪ್ರಾಂಶುಪಾಲರು ಈ ವಿದ್ಯಾರ್ಥಿ ವೇತನದ ಕಾರ್ಯಗಳ ನಿಮಿತ್ತ ಪ್ರತಿ ಕಾಲೇಜಿನಲ್ಲೂ ಕಂಪ್ಯೂಟರ್ ಜ್ಞಾನವುಳ್ಳಂತಹ ಒಬ್ಬ ಸಿಬ್ಬಂದಿಯನ್ನು ಪರಿಶೀಲನಾ ಅಧಿಕಾರಿಯಾಗಿ ಕಡ್ಡಾಯವಾಗಿ ನೇಮಿಸುವುದು.
2. ಸದರಿ ಅಧಿಕಾರಿಯವರಿಗೆ ಈ ವಿದ್ಯಾರ್ಥಿ ವೇತನದ ಕುರಿತು ಸಂಪೂರ್ಣ ಮಾಹಿತಿಯನ್ನು ಹೊಂದಿರುವಂತೆ ಸೂಚಿಸುವುದು.
3. ಸಂಸ್ಥೆಯವರಿಗೆ ನೀಡಿರುವ ಪಾಸ್‌ವರ್ಡ್‌ನ್ನು ಬೇರೊಬ್ಬರ ಜೊತೆ ಯಾವುದೇ ಕಾರಣಕ್ಕೂ ಹಂಚಿಕೊಳ್ಳಬಾರದು.
4. ಗೌಪ್ಯತೆಯ ದೃಷ್ಟಿಯಿಂದ ಆಗಾಗ ಪಾಸ್‌ವರ್ಡ್‌ನ್ನು ಬದಲಾವಣೆ ಮಾಡುವುದು.
5. ಸಂಬಂಧಪಡದ ವ್ಯಕ್ತಿಗಳಿಗೆ ಈ ಕಾರ್ಯದ ಪ್ರಕ್ರಿಯೆಯ ಕುರಿತು ವೀಕ್ಷಣೆಗೆ ಅವಕಾಶ ನೀಡಬಾರದು.
6. ಈ ಅಂತರ್ಜಾಲದಲ್ಲಿ ಲಾಗಿನ್ ಆದ ಬಳಿಕ ಯಾವುದೇ ನ್ಯೂನತೆಗಳು ಕಂಡು ಬಂದಲ್ಲಿ, ಮತ್ತೊಮ್ಮೆ Username & Passwordನ್ನು ದಾಖಲಿಸುವುದು.
7. ಆ್ಯಂಟಿವೈರಸ್ ಅನ್ನು ಅಳವಡಿಸಿರುವ ಕಂಪ್ಯೂಟರನ್ನೇ ಈ ಪ್ರಕ್ರಿಯೆಗಾಗಿ ಉಪಯೋಗಿಸುವುದು.
8. ದೂಳುರಹಿತ ವಾತಾವರಣವು ಈ ಪ್ರಕ್ರಿಯೆಗೆ ಸೂಕ್ತವಾಗಿರುತ್ತದೆ.
9. **<u>ವಿದ್ಯಾರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ಮುಂದಿನ ಅಗತ್ಯ ಕ್ರಮಕ್ಕಾಗಿ ರಾಜ್ಯದ ನೋಡಲ್ ಅಧಿಕಾರಿಗಳವರಿಗೆ online. ಮೂಲಕ ಸಲ್ಲಿಸುವುದು(forward ಮಾಡುವುದು).</u>**

## <u>ಕಾಲೇಜು/ಸಂಸ್ಥೆಯ ಪರಿಶೀಲನಾ ಅಧಿಕಾರಿಯವರ ಕಾರ್ಯ ಹಾಗೂ ಜವಾಬ್ದಾರಿಗಳು:-</u>

- ಈ ವಿದ್ಯಾರ್ಥಿ ವೇತನದ ಪ್ರಕ್ರಿಯೆಯ ಕುರಿತು ಸಂಪೂರ್ಣ ಜ್ಞಾನವನ್ನು ಹೊಂದಿರುವುದು.
- ಅರ್ಜಿಗಳು ತಿರಸ್ಕೃತಗೊಳ್ಳುವ ಕಾರಣಗಳ ಮೇರೆಗೆ ತಿದ್ದುಪಡಿ ಮಾಡಲು ಅವಕಾಶವಿರುವುದರಿಂದ ಸನ್ನಿವೇಶಕ್ಕೆ ತಕ್ಕಂತೆ ಅಗತ್ಯ ಕ್ರಮ ಕೈಗೊಳ್ಳುವುದು.

## <u>ಕಾಲೇಜು/ಸಂಸ್ಥೆಯ ಪರಿಶೀಲನಾ ಅಧಿಕಾರಿಯವರು ವಿದ್ಯಾರ್ಥಿಗಳು online ಮೂಲಕ ಸಲ್ಲಿಸುವ ಅರ್ಜಿಗಳನ್ನು ಪರಿಶೀಲಿಸುವ / ಕ್ರೋಢೀಕರಿಸುವ ಸಮಯದಲ್ಲಿ ಅನುಸರಿಸಬೇಕಾದ ನಿಯಮಗಳು:-</u>

### <u>ಮೊದಲನೇ ಹಂತ:</u>

ಕಾಲೇಜು/ಸಂಸ್ಥೆಯು **National Scholarship Portal**ನಲ್ಲಿ ನೋಂದಣಿಯಾಗಿರದಿದ್ದಲ್ಲಿ ಅಂತಹ ಕಾಲೇಜು/ಸಂಸ್ಥೆಯವರು ರಾಜ್ಯದ ನೋಡಲ್ ಅಧಿಕಾರಿಯವರನ್ನು ಸಂಪರ್ಕಿಸಿ, ಅವರಿಂದ **User ID & Password**ನ್ನು ಪಡೆಯುವುದು. ನೋಡಲ್ ಅಧಿಕಾರಿಯವರಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬೇಕಾದಲ್ಲಿ ಈ ಮುಂದೆ ನಮೂದಿಸಿರುವ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

Shri. NAMADEV NODAL OFFCIER – **8147139859 LAND LINE NO. 080 -23311330**

**ಎರಡನೇ ಹಂತಃ–**

- ವಿದ್ಯಾರ್ಥಿಯ ಅರ್ಜಿಯನ್ನು ಪರಿಶೀಲಿಸುವ ಸಂಪೂರ್ಣ ಜವಾಬ್ದಾರಿ ಸಂಸ್ಥೆಯದ್ದಾಗಿರುತ್ತದೆ.

- ವಿದ್ಯಾರ್ಥಿಯು **National Scholarships Portal**ನಲ್ಲಿ ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಿರುವ ದಾಖಲೆಗಳ ಅಥವಾ ಖುದ್ದಾಗಿ ತಮಗೆ ಸಲ್ಲಿಸಿದ ದಾಖಲೆಗಳ ನೈಜತೆಯ ಕುರಿತು ಮೂಲ ದಾಖಲೆಗಳೊಂದಿಗೆ ತಾಳೆ ನೋಡುವುದು.

ವಿದ್ಯಾರ್ಥಿಗಳು online ಮೂಲಕ ಸಲ್ಲಿಸಿದ ಅರ್ಜಿ/ದಾಖಲೆಗಳನ್ನು ಕಾಲೇಜಿನ ಪ್ರಾಂಶುಪಾಲರು ಪರಿಶೀಲಿಸಿ / ಕ್ರೋಢೀಕರಿಸಿ **ಮುಂದಿನ ಅಗತ್ಯ ಕ್ರಮಕ್ಕಾಗಿ ರಾಜ್ಯದ ನೋಡಲ್ ಅಧಿಕಾರಿಗಳವರಿಗೆ online ಮೂಲಕವೇ ಸಲ್ಲಿಸುವುದು( Forward ಮಾಡುವುದು).** ಒಂದು ವೇಳೆ ಪ್ರಾಚಾರ್ಯರು ವಿದ್ಯಾರ್ಥಿಗಳ ಮಾಹಿತಿಯನ್ನು ರಾಜ್ಯದ ನೋಡಲ್ ಅಧಿಕಾರಿಯವರಿಗೆ online ಮೂಲಕ ಸಲ್ಲಿಸದೇ**( Forward ಮಾಡದೇ)** ತಮ್ಮಲ್ಲಿಯೇ ಉಳಿಸಿಕೊಂಡಲ್ಲಿ ಹಾಗೂ online ಮೂಲಕ ನಿಗಧಿತ ಸಮಯದಲ್ಲಿ ಸಲ್ಲಿಸದಿದ್ದಲ್ಲಿ**( Forward ಮಾಡದಿದ್ದಲ್ಲಿ)** ಅಂತಹ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯುವುದರಿಂದ ವಂಚಿತರಾಗುವ ಸಾಧ್ಯತೆಗಳಿರುತ್ತವೆ. ಇದಕ್ಕೆ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರೇ ಜವಾಬ್ದಾರರಾಗುತ್ತಾರೆ.

**ವಿಶೇಷ ಸೂಚನೆ:**

1. ಇಲಾಖೆಯ ಹೊರತಾಗಿ ಬೇರೆ ಯಾವುದೇ ಸಂಘ/ಸಂಸ್ಥೆಗಳ ವತಿಯಿಂದ ಮಾಹಿತಿ ನೀಡುವುದಾಗಿ ಬರುವ ಕರೆಗಳು/ಪತ್ರಗಳಿಗೆ ವಿದ್ಯಾರ್ಥಿಗಳು ಸ್ಪಂದಿಸಬಾರದು. ಹಾಗೂ ಈ ಸಂಬಂಧ ಸಂಘ/ಸಂಸ್ಥೆಗಳಿಗೆ ಹಣ ಪಾವತಿ ಮಾಡಿ ನೋಂದಣಿ ಮಾಡಿಕೊಳ್ಳುವುದು/ಇತರೆ ಏನನ್ನೂ ಮಾಡಬಾರದಾಗಿ ತಿಳಿಸಿದೆ. ಆದಾಗ್ಯೂ ಅಂತಹ ಸಂಘ/ಸಂಸ್ಥೆಗಳೊಂದಿಗೆ ಪತ್ರವ್ಯವಹಾರ/ನೋಂದಣಿ ಇತ್ಯಾದಿ ಮಾಡಿಕೊಂಡು ಯಾವುದೇ ಅವಘಡಗಳು ಸಂಭಸಿದಲ್ಲಿ ಅದಕ್ಕೆ ಸಂಬಂಧಪಟ್ಟ ವಿದ್ಯಾರ್ಥಿಗಳು/ಪೋಷಕರೇ ಹೊಣೆಗಾರಾಗುತ್ತಾರೆ. ಯಾವುದೇ ಸಂಘ/ಸಂಸ್ಥೆಗಳ ವತಿಯಿಂದ ಈ ರೀತಿ ಅವ್ಯವಹಾರ ನಡೆಯುತ್ತಿರುವುದು ಕಂಡು ಬಂದಲ್ಲಿ, ಕೂಡಲೇ ಇಲಾಖೆಯ ಗಮನಕ್ಕೆ ತರಲು ಸೂಚಿಸಿದೆ.
2. ಅಂತೆಯೇ ಕೆಲವು ಕಾಲೇಜುಗಳ ಪ್ರಾಚಾರ್ಯರುಗಳು/ಸಿಬ್ಬಂದಿ ವರ್ಗದವರುಗಳು ನಿಗಧಿತ ಸಮಯದಲ್ಲಿ ವಿದ್ಯಾರ್ಥಿಗಳ ವಿವರವನ್ನು ಇಲಾಖೆಗೆ ಕಳುಹಿಸುವುದರಲ್ಲಿ ವಿನಾಕಾರಣ ವಿಳಂಬ ಮಾಡುತ್ತಿರುವುದು / ದೃಢೀಕೃತ/ಕ್ರೋಢೀಕೃತ ಅರ್ಜಿಗಳನ್ನು ರವಾನಿಸದೇ ತಮ್ಮಲ್ಲಿಯೇ ಇರಿಸಿಕೊಳ್ಳುವುದು ಕಳೆದ ಸಾಲುಗಳಲ್ಲಿ ಇಲಾಖಾ ಗಮನಕ್ಕೆ ಬಂದಿರುತ್ತದೆ ಎಂದು ವಿಷಾದ ವ್ಯಕ್ತಪಡಿಸಲಾಗಿದೆ. ಇದರಿಂದ ವಿದ್ಯಾರ್ಥಿ ವೇತನ ಪಡೆಯುವಲ್ಲಿ ಅರ್ಹ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ. ಹಾಗೂ ಹೆಚ್ಚಿನ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕೆ ಅರ್ಜಿಗಳನ್ನೇ ಸಲ್ಲಿಸದಿರುವುದು ಕೂಡ ಕಂಡು ಬರುತ್ತಿದೆ. ದಯವಿಟ್ಟು ಸಂಬಂಧ ಪಟ್ಟ ಕಾಲೇಜುಗಳ ಪ್ರಾಚಾರ್ಯರುಗಳು ಈ ಬಗ್ಗೆ ತೀವ್ರ ನಿಗಾವಹಿಸಿ ನಿಗಧಿತ ಸಮಯದಲ್ಲಿ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.
3. ವಿದ್ಯಾರ್ಥಿಗಳು/ಪೋಷಕರುಗಳು ಸುಳ್ಳು ದಾಖಲೆಗಳನ್ನು ನೀಡಿರುವುದು ಕಳೆದ ಸಾಲುಗಳಲ್ಲಿ ಕಂಡು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಾಚಾರ್ಯರು ತಮ್ಮ ಹಂತದಲ್ಲಿಯೇ ಸಂಬಂದಪಟ್ಟ ವಿದ್ಯಾರ್ಥಿಗಳು/ಪೋಷಕರು ನೀಡುವ ಅಂಕಪಟ್ಟಿಗಳು, ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರಗಳನ್ನು ತಮ್ಮಲ್ಲಿ ಲಭ್ಯವಿರುವ ದಾಖಲೆಗಳೊಂದಿಗೆ ಪರಿಶೀಲಿಸುವುದು.

**ANNEXURE-III**

# INCOME AFFIDAVIT

Declaration of Income of Parent/Guardian for the year (ending on 31st March 2018) {Enter relevant year} for purpose of scholarship granted under the "Central Secotr Scheme of Scholarship for College and University Students".

I, ------------------------------------------------------------------------------ son/daughter of Shri/Smt ------------------------------------------------------------------------------------------------
-------------------------------- Presently residing at -------------------------------------------------
------------------------------------------------------------------------------------------------------------------
------ solemnly affirm and say as follows:

1. That my son/daughter/dependent Shri/Kumari -------------------------------------------- -------------------- who has been provisionally selected in ----------------------------------- ----------------------------------------- under the "Central Sector Scheme of Scholarship For College and University Students", is studying in ------------------ ------------------------------------- (here give the name of institution).
2. That my annual income in the preceding year (ending the 31st March 2018) is Rs.---------------- as per details furnished in the Scheduled here under written. I also affirm that particulars of property held by me is as shown in the Schedule and that I have correctly indicated the amount on various taxes/cesses and land revenue paid by me. I make myself personally responsible for the accuracy of the facts and figures furnished.
3. That the statements made in the foregoing paragraphs are true to my knowledge.
4. That I further undertake that in the event of the particulars given in this declaration being found false. I shall refund to the President of India DOUBLE the amount of the scholarship to the said scholar(s) and the Government's decision on whether the declaration of particulas is false shall be final and binding on me.

Signature :
Name in full:

To be signed in the presence of Notary Public or a Magistrate/Ist Class Magistrate Executive/Revenue Officer/who would also affix his signature and seal.

## SCHEDULE

| | | (a) Independently as owner | (b) Jointly as owner | (c) Independently as tenant |
|---|---|---|---|---|
| | (i) Area | | | |
| | (ii) Village | | | |
| | (iii) Survey No. | | | |
| | (iv) Land Revenue Assessment | | | |
| | (v) Annual Income | Rs. | Rs. | Rs. |

VII. Other source of Income:

(i) Income from subsidiary industries
Part-time occupation — Rs.--------------------------------

(ii) Amounts drawn as wages — Rs.--------------------------------

(iii) Any other Income — Rs.--------------------------------

VIII. Annual Income of wife/husband and of the Scholar's Income from any source — Rs.--------------------------------

(a) Annual Basic Pay for ----------(Year) without Deduction of Income Tax
(Certificate from the employer/Income Tax Authority/Revenue Authority may be attached) — Rs.--------------------------------

(b) Special Pay/Bonus. — Rs.--------------------------------

(c) Deputation allowance and honoraria Including NCC honoraria. — Rs.--------------------------------

(d) Total of (a), (b) and (c) — Rs.--------------------------------

(e) Amount of Contribution to Provident Fund — Rs.--------------------------------

(f) Payment towards LIC/CTD — Rs.--------------------------------

(g) Total (e) and (f) — Rs.--------------------------------

Signauture of Parent/
Guardian of the Scholar

**N.B.**

(1) Total income of the family should include income only of father & mother of the Scholar and of no other members though they may be earning.

(2) If father is dead, mother's income will be shown along with the income, if any, of the Scholar from shares, property etc.,

(3) If both father and mother of the scholar are deceased, the income, if any, in the scholar's name only will be shown, and not the income of the guardian who may be supporting the scholar.

(4) Income for the purpose of Means Test is defined as under:

(a) In the case of salaried class, basic pay plus income if any form other sources and would not include allowance like Dearness Allowance, City Compensatory Allowance etc.
(b) In the case of income from source liable to income tax, income computed (after deduction for rebate able items) for the purpose of assessment of income tax, as per Income Tax Rules for the year.
(c) In the case of income not liable to income tax, such as income from Agriculture, etc, the net income that is arrived at after deduction expenditure incurred for earning that income.

II. Property held and income (Houses, Shops, Buildings, House sites etc.,)

(a) House No. ----------------------------------------

(b) Street/Road ----------------------------------------

(c) Village/Town/City ----------------------------------------

(d) Area of Site ----------------------------------------

(e) Rent derived if any ----------------------------------------

(f) House Tax Rs.--------------------

(a) Sanitary cess or other Rs.--------------------

(b) Net Annual Income Rs.--------------------

Whether the whole or part of land has been given out to tenants, if 'yes' particulars:

III. Income from shops:

(i) Address of shop ----------------------------------------

(ii) Nature of trade ----------------------------------------

(iii) Sales Tax, Income Tax Paid Rs.----------------------------------------

(iv) Licence No. ----------------------------------------

(v) Annual Income Rs.----------------------------------------

IV. Salaries Drawn, by self / spouse :

(i) Name of the Employer ----------------------------------------

(ii) Office/Unit in which Working and designation ----------------------------------------

(iii) Address of Office ----------------------------------------

(a) Annual Basic Pay for .......... (Year) without Deduction of Income Tax (Certificate from the employer/Income Tax Authority/Revenue Authority may be attached) Rs.--------------------

(b) Special Pay/Bonus Rs.--------------------

(c) Deputation allowance and Honoraria including NCC honoraria Rs.--------------------

(d) Total of (a), (b) and (c) Rs.--------------------

(e) Amount of contribution to Provident Fund Rs.--------------------

(f) Payments towards LIC/CTD Rs.--------------------

(g) Total of (e) and (f) Rs.--------------------

V. In cace of Government Servants, Certificate may be given That you do not belong to 'creamy-layer', as per Extent govt., instructions.

VI. Other benefits like house rent allowance, free house and other perquisites --------------------